ಕಾಡಿಗೆ ಕಣ್ಣು

ಕಲೀಮ್ ಉಲ್ಲಾ



# ಫ್ರೇಮಿಗೇ ಸಿಕ್ಕದ ಬಾಲದಂಡೆ ಹಕ್ಕಿ

ಈ ಪಕ್ಷಿಯ ಸೊಬಗು ಇರುವುದೇ ಇದರ ಉದ್ದ ಬಾಲದ ಲಾವಣ್ಯದಲ್ಲಿ. ಇವುಗಳಲ್ಲಿ ಬಿಳಿ ಮತ್ತು ನಸುಗೆಂಪು ಬಣ್ಣದ ಎರಡು ತಳಿಗಳಿದ್ದಾವೆ. ಬಿಳಿ ಬಣ್ಣದ ಪ್ಯಾರಾಡೈಸ್ ಗೂಡು ಸಿಗುವುದು ಕೆಲವು ಕಡೆ ಮಾತ್ರ. ಬೆಂಗಳೂರಿನ ಸ್ಕೂಲ್ ಆಫ್ ವ್ಯಾಲಿ, ಹಾಗೂ ರಾಮನಗರ ಮತ್ತು ನಂದಿ ಬೆಟ್ಟದಲ್ಲಿ ಇವು ಹೆಚ್ಚಾಗಿ ಸಿಗುತ್ತವೆ ಎಂದು ಕೇಳಿದ್ದೇನೆ.



ಬಯಲು ಸೀಮೆಯಲ್ಲಿ ಪಟಗಾರರಿಗೆ ಅಂತಹ ಮಹತ್ವದ ಪ್ರಾಣಿ ಪಕ್ಷಿಗಳು ಸಿಗುವುದಿಲ್ಲ ಎಂಬ ಉಡಾಫೆ ಅನೇಕರಲ್ಲಿ ಇರುವಂತೆ ನನ್ನಲ್ಲೂ ತುಂಬಿತ್ತು. ಅದ್ಭುತ ಪ್ರಾಣಿ, ಪಕ್ಷಿಗಳೆಲ್ಲಾ ಮಲೆನಾಡಿನ ಕಾಡಿನಲ್ಲೇ ಠಿಕಾಣಿ ಹೂಡಿದ್ದಾವೆಂಬ ದಡ್ಡತನವಿತ್ತು. ಬಿಸಿಲ ನಾಡಿನ ಬಗ್ಗೆ ನನಗಿದ್ದ ಕಡಿಮೆ ತಿಳಿವಳಿಕೆ ಹಾಗೂ ಉಪೇಕ್ಷೆಯೇ ಇದಕ್ಕೆಲ್ಲಾ ಕಾರಣ. ನಾವು ಈ ಜಗತ್ತಿನಲ್ಲಿರುವ ಯಾವುದನ್ನೂ ಅಸಡ್ಡೆಯಿಂದ ಕಾಣಲೇಬಾರದು. ಹಂಪಿಯಲ್ಲಿನ ಜೀವವೈವಿಧ್ಯತೆಯ ಸೊಬಗನ್ನು ನೋಡಿದ ನಂತರ ಹೊಸ ಜ್ಞಾನೋದಯ ಆಯಿತು.

ನನ್ನ ಆತ್ಮೀಯ ಗೆಳೆಯ ಜಿ.ಎಫ್. ಕುಟ್ರಿ ಊರು ರಾಣೆಬೆನ್ನೂರಿನ ಸಮೀಪದಲ್ಲಿರುವ ಬುಡಪನಹಳ್ಳಿ. ಅಲ್ಲಿಗೆ ಅದೆಷ್ಟೋ ಸಲ ಅವನ ಜೊತೆ ಹೋಗಿದ್ದರೂ ಊರ ಸುತ್ತಲಿನ ಕುರುಚಲು ಕಾಡನ್ನು ಸೂಕ್ಷ್ಮವಾಗಿ ಗಮನಿಸಿ ನೋಡಿರಲಿಲ್ಲ. ಅತಿಥಿಯಾಗಿ ಹೋಗಿ ಕೇವಲ ಹಬ್ಬದೂಟ ಬಾರಿಸಿ, ಕೆಲ ಗಳಿಗೆ ಇದ್ದು ಬಂದಿದ್ದು ಬಿಟ್ಟರೆ ಅಲ್ಲಿನ ಪರಿಸರವನ್ನು ಪರಿಶೀಲಿಸಿರಲಿಲ್ಲ. ಯಾವುದೇ ಪರಿಸರದ ಮಹತ್ವದ ವಿಷಯಗಳು ಕೈತೆಕ್ಕೆಗೆ ದಕ್ಕಬೇಕಾದರೆ ಒಂದಷ್ಟು ಹುಡುಕಾಟ, ತಿರುಗಾಟ, ಮಾಡಬೇಕು. ಇಂತದ್ದೆಲ್ಲಾ ಮಾಡುವ ಮೊದಲು ದೊಡ್ಡಮಟ್ಟದ ತಿಕ್ಕಲುತನದ ಗುಣ ಇರುವುದು ಉತ್ತಮ. ಆಗ ಮಾತ್ರ ಏನಾದರೂ ಹೊಸದನ್ನು ಅನ್ವೇಷಿಸಬಹುದು. ನಾನು ಯಾವಾಗಲೂ ಸ್ಥಳೀಯವಾಗಿ ಹೀಗೆ ಪ್ರಾಣಿ, ಪಕ್ಷಿ, ಪರಿಸರ ಎಂದು ಹಾಳಾದ 'ಲೋಕವಿರೋಧಿ'ಗಳನ್ನು ಹುಡುಕುತ್ತೇನೆ. ಇವರೆಲ್ಲ ನಮಗೆ ಅಮೂಲ್ಯ ಮುತ್ತು ರತ್ನಗಳಿದ್ದಂತೆ.

ಇಂತದ್ದೇ ಒಬ್ಬ ನುರಿತ, ಪ್ರಕೃತಿ ಅರಿತ ಅಲೆಮಾರಿಯೊಬ್ಬ ಅದೃಷ್ಟವೆಂಬಂತೆ ಸಿಕ್ಕಿಬಿಟ್ಟ. ಕುಟ್ರಿ ಊರಿನ ಪಕ್ಕದಲ್ಲಿ ವೆಂಕಟಾಪುರ ಎಂಬ ಸಣ್ಣ ಹಳ್ಳಿಯಿದೆ. ಇಲ್ಲಿ ರೈತಾಪಿಯಾದ ಚಂದ್ರು ಶಿಡೇನೂರು ಎಂಬ ಯುವಕನೀತ. ಇವನನ್ನು 'ಸ್ಥಳೀಯ ಸಲೀಂ ಅಲಿ' ಎಂದು ಆರಾಮಾಗಿ ಕರೆಯಬಹುದು. ತನ್ನ ಜಮೀನು ನೋಡಿಕೊಂಡು,